ವಿಜಯವಾಣಿ
ಕನ್ನಡಿಗರ ಧ್ವನಿ

## ಅಖಿಲ ಭಾರತ ಅಂತರ ವಿವಿ ಈಜು: ಅರವಿಂದ್ ಸ್ವರ್ಣ ಡಬಲ್

# ಮೀನಾಕ್ಷಿ ಮತ್ತೊಂದು ದಾಖಲೆ

**ಬೆಂಗಳೂರು:** ಜೈನ್ ವಿಶ್ವವಿದ್ಯಾಲಯದ ಮೀನಾಕ್ಷಿ ವಿಕೆಆರ್, ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಮತ್ತೊಂದು ದಾಖಲೆ ನಿರ್ಮಿಸಿ ಎರಡು ಚಿನ್ನ ಜಯಿಸಿದರು. ಇದರೊಂದಿಗೆ ಕೂಟದಲ್ಲಿ ಮೀನಾಕ್ಷಿ ಒಟ್ಟು ಐದು ಹೊಸ ದಾಖಲೆ ನಿರ್ಮಿಸಿದಂತಾಗಿದೆ. ವಿಟಿಯು ಬೆಳಗಾವಿಯ ಅರವಿಂದ್.ಎಂ ಕೂಡ 2 ಚಿನ್ನ ಜಯಿಸಿದರು.

ಕನಕಪುರದ ಜೈನ್ ವಿವಿ ಗ್ಲೋಬಲ್ ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ ಕೂಟದ ನಾಲ್ಕನೇ ದಿನ, ಏಷ್ಯಾಡ್‌ನಲ್ಲಿ ಸ್ಪರ್ಧಿಸಿದ್ದ ಗುಜರಾತ್ ವಿವಿಯ ನೀಲ್ ಕಂಟ್ರ್ಯಾಕ್ಟರ್ 50 ಮೀ ಫ್ರೀಸ್ಟೈಲ್ ಸ್ಪರ್ಧೆಯನ್ನು 24.51 ಸೆಕೆಂಡ್‌ಗಳಲ್ಲಿ ಕ್ರಮಿಸಿ 'ಕೂಟದ ಅತಿವೇಗದ ಈಜುಗಾರ' ಎನ್ನುವ ದಾಖಲೆ ಬರೆದರು. 4/100ಮೀ ಫ್ರೀಸ್ಟೈಲ್ ರಿಲೇಯಲ್ಲಿ ಪಂಜಾಬ್ ವಿವಿ 2013ರಲ್ಲಿ ತಾನೇ ನಿರ್ಮಿಸಿದ್ದ ದಾಖಲೆ ಅಳಿಸಿ ಹಾಕಿದರೆ, ಮಹಿಳೆಯರ 4/100 ಮೀ ಫ್ರೀಸ್ಟೈಲ್ ರಿಲೇಯನ್ನು 4ನಿಮಿಷ. 25.02 ಸೆಕೆಂಡ್‌ನಲ್ಲಿ ಕ್ರಮಿಸಿದ ದೆಹಲಿ ವಿವಿ, 2011ರಲ್ಲಿ ಜೈನ್ ವಿವಿ (4ನಿ.26.52ಸೆ) ನಿರ್ಮಿಸಿದ್ದ ದಾಖಲೆ ಅಳಿಸಿಹಾಕಿತು.

**ಶಿಖಾ ದಾಖಲೆ ಅಳಿಸಿದ ಮೀನಾಕ್ಷಿ:** ಮಹಿಳಾ ವಿಭಾಗದಲ್ಲಿ ಜೈನ್ ವಿವಿಯ ಮೀನಾಕ್ಷಿ 100 ಮೀ ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ 1ನಿಮಿಷ 7.95 ಸೆಕೆಂಡ್‌ನಲ್ಲಿ ಕ್ರಮಿಸಿ ಕೂಟದ ಐದನೇ ದಾಖಲೆಯೊಂದಿಗೆ ಚಿನ್ನ ಗೆದ್ದರು. ಮೀನಾಕ್ಷಿ 2011ರಲ್ಲಿ ಬೆಂಗಳೂರಿನಲ್ಲಿ ನಡೆದ ಸ್ಪರ್ಧೆಯಲ್ಲಿ ಶಿಖಾ ಟಂಡನ್ (1ನಿ.9.51ಸೆ) ನಿರ್ಮಿಸಿದ್ದ ದಾಖಲೆ ಮುರಿದರು. ಇದಕ್ಕೂ ಮುನ್ನ ನಡೆದ 200 ಮೀ ಮೆಡ್ಲೆಯನ್ನು 2ನಿಮಿಷ 31.55ಸೆಕೆಂಡ್‌ನಲ್ಲಿ ಕ್ರಮಿಸಿ ಮೀನಾಕ್ಷಿ ಚಿನ್ನ ಗೆದ್ದಿದ್ದರು. ಪುರುಷರ ವಿಭಾಗದಲ್ಲಿ ವಿಟಿಯು ತಂಡದ ಅರವಿಂದ್.ಎಂ ಪುರುಷರ 200 ಮೀ ಮೆಡ್ಲೆಯನ್ನು 2ನಿಮಿಷ.11.88ಸೆಕೆಂಡ್‌ನಲ್ಲಿ ಕ್ರಮಿಸಿ ದಿನದ ಮೊದಲ ಚಿನ್ನ ಜಯಿಸಿದರೆ, ಬಳಿಕ 100ಮೀ ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯನ್ನು 59.75ಸೆಕೆಂಡ್‌ನಲ್ಲಿ ಕ್ರಮಿಸಿ 2ನೇ ಚಿನ್ನ ಗೆದ್ದರು.


ಮೀನಾಕ್ಷಿ ಈಜಿನ ವೈಖರಿ...

### 4ನೇ ದಿನದ ಫಲಿತಾಂಶ
(ಪ್ರಥಮ ಸ್ಥಾನ ಮಾತ್ರ)

**ಪುರುಷರು:** **50 ಮೀ ಫ್ರೀಸ್ಟೈಲ್:** ನೀಲ್ ಕಂಟ್ರ್ಯಾಕ್ಟರ್ (ಗುಜರಾತ್ ವಿವಿ, 24.81ಸೆ), **100ಮೀ ಬ್ಯಾಕ್‌ಸ್ಟ್ರೋಕ್:** ಅರವಿಂದ್ ಎಂ (ವಿಟಿಯು, 59.75ಸೆ), **200ಮೀ ವೈಯಕ್ತಿಕ ಮೆಡ್ಲೆ:** ಅರವಿಂದ್ ಎಂ (ವಿಟಿಯು, 2ನಿ.11.88ಸೆ), **4/100ಮೀ ಫ್ರೀಸ್ಟೈಲ್ ರಿಲೇ:** ಪಂಜಾಬ್ ವಿವಿ (3ನಿ.47.10ಸೆ).

**ಮಹಿಳೆಯರು:** **50ಮೀ ಫ್ರೀಸ್ಟೈಲ್:** ಸ್ನೇಹಾ ಟಿ (ಆರ್‌ಜಿಯುಎಚ್‌ಎಸ್, ಬೆಂಗಳೂರು 28.82ಸೆ), **100ಮೀ ಬ್ಯಾಕ್ಸ್ಟ್ರೋಕ್:** ಮೀನಾಕ್ಷಿ (ಜೈನ್ ವಿವಿ, 1ನಿ.7.95ಸೆ), **200ಮೀ ವೈಯಕ್ತಿಕ ಮೆಡ್ಲೆ:** ಮೀನಾಕ್ಷಿ (ಜೈನ್ ವಿವಿ, 2ನಿ.31.55ಸೆ), **4/100ಮೀ ಫ್ರೀಸ್ಟೈಲ್ ರಿಲೇ:** ದೆಹಲಿ ವಿವಿ (4ನಿ.25.02ಸೆ)

**ಡೈವಿಂಗ್:** **ಪುರುಷರ 1ಮೀ.ಸ್ಪ್ರಿಂಗ್‌ಬೋರ್ಡ್:** ಗೌರವ್ ಆರ್ (ಡಿಎವಿವಿ, 238.10), **ಮಹಿಳೆಯರ 1ಮೀ ಸ್ಪ್ರಿಂಗ್‌ಬೋರ್ಡ್:** ಸುಶ್ರಿತಾ ವಿ(ಗೋವಾ, 146.55).